ಕರ್ನಾಟಕ ಸರ್ಕಾರ

# ಕಾರ್ಯನಿರ್ವಾಹಕ ಅಧಿಕಾರಿಗಳ ಕಛೇರಿ, ಮೈಸೂರು ಅರಮನೆ ಮಂಡಳಿ,

**Office of the Executive Officer, Mysore Palace Board, Mysore**

**Phone: 0821-2421051, 2434425, e mail ID : dd@mysorepalace.gov.in, GST :29AAAGM0484M1ZX**

ಸಂಖ್ಯೆ:ಕಾನಿಅ/ಮೈಅಮಂ/ಆವಿ/ಇಎಸ್‌ಟಿ-4/2019-20/645 ದಿನಾಂಕ: 27/02/2020

## ಅನುಮತಿ ಪತ್ರ

ವಿಷಯ: ಮೈಸೂರು ಅರಮನೆಯ ಜಯರಾಮ-ಬಲರಾಮ ದ್ವಾರದ ಮುಂಭಾಗದಲ್ಲಿ ಕಾರ್ಯಕ್ರಮ ನಡೆಸಲು ಅನುಮತಿ ನೀಡುವ ಬಗ್ಗೆ.

ಉಲ್ಲೇಖ: ಡಾ. ಎಲ್.ಬಸವರಾಜು, ಪ್ರಾಂಶುಪಾಲರು, ಎ ಟಿ ಎಂ ಇ, ಮೈಸೂರು ರವರ ಮನವಿ ದಿನಾಂಕ: 22/02/2020

*-*-*

ವಿಷಯಕ್ಕೆ ಸಂಬಂಧಿಸಿದಂತೆ, ಉಲ್ಲೇಖ ಪತ್ರದಲ್ಲಿ ಡಾ. ಎಲ್.ಬಸವರಾಜು, ಪ್ರಾಂಶುಪಾಲರು, ಎ ಟಿ ಎಂ ಇ, ಮೈಸೂರು ರವರ ವತಿಯಿಂದ " **ವನ್ಯ ಮೃಗಗಳ ಸಂರಕ್ಷಣೆ ಮತ್ತು ಪೋಷಣೆಯ ಮಹತ್ವ** ", ಎಂಬ ಕಾರ್ಯಕ್ರಮ ನಡೆಸಲು ದಿನಾಂಕ: 01/03/2020ರ ಬೆಳಿಗ್ಗೆ 6.00 ರಿಂದ 9.00 ಗಂಟೆ ವರೆಗೆ ಮೈಸೂರು ಅರಮನೆ ಜಯರಾಮ-ಬಲರಾಮ ದ್ವಾರದ ಮುಂಭಾಗದಲ್ಲಿ ಕೋರಿರುವ ಮೇರೆಗೆ ಸದರಿ ದಿನದಂದು ಕಾರ್ಯಕ್ರಮವನ್ನು ನಡೆಸಲು ಈ ಕೆಳಕಂಡ ಷರತ್ತು ಮತ್ತು ನಿಬಂಧನೆಗಳಿಗೆ ಒಳಪಟ್ಟು ಅರಮನೆ ಮಂಡಳಿ ವತಿಯಿಂದ ಅನುಮತಿಯನ್ನು ನೀಡಲಾಗಿರುತ್ತದೆ.

**ಷರತ್ತು ಮತ್ತು ನಿಬಂಧನೆಗಳು :-**

1. ಅರಮನೆ ಮಂಡಳಿಯಿಂದ ನೀಡಲಾಗಿರುವ ಅನುಮತಿ ಪತ್ರದಲ್ಲಿ ಸೂಚಿಸಲ್ಪಟ್ಟ ಕಾರ್ಯಕ್ರಮ ನಡೆಸಲು ಮಾತ್ರ ಅನ್ವಯವಾಗುತ್ತದೆ.
2. ಕಾರ್ಯಕ್ರಮ ನಡೆಸಲು ನಿಗಧಿಪಡಿಸಿರುವ ಅವಧಿಯ ಒಳಗೆ ಮುಕ್ತಾಯಗೊಳಿಸುವುದು.
3. ಅರಮನೆ ಮಂಡಳಿಗೆ ಒಳಪಡುವ ಯಾವುದೇ ಆಸ್ತಿಪಾಸ್ತಿಗಳಿಗೆ ಧಕ್ಕೆಯಾಗದಂತೆ ಕಾರ್ಯಕ್ರಮ ನಡೆಸುವುದು.
4. ಕಾರ್ಯಕ್ರಮ ನಡೆಸುವ ದ್ವಾರದ ಅಕ್ಕಪಕ್ಕದಲ್ಲಿ ಅರಮನೆ ವೀಕ್ಷಣೆಗೆ ಬರುವ ಸಾರ್ವಜನಿಕರಿಗೆ ಹಾಗೂ ಪ್ರವಾಸಿಗರಿಗೆ ಯಾವುದೇ ರೀತಿಯ ಅಡಚಣೆಗೆ ಆಸ್ಪದ ನೀಡಕೂಡದು.

T. S. [signature]
ಉಪ ನಿರ್ದೇಶಕರು
ಉಪ ನಿರ್ದೇಶಕರು
ಮೈಸೂರು ಅರಮನೆ ಮಂಡಳಿ
ಮೈಸೂರು ಅರಮನೆ ಮಂಡಳಿ, ಮೈಸೂರು
ಮೈಸೂರು.

**ರವರಿಗೆ,**

ಡಾ. ಎಲ್.ಬಸವರಾಜು, ಪ್ರಾಂಶುಪಾಲರು, ಎ ಟಿ ಎಂ ಇ, ಮೈಸೂರು

**ಪ್ರತಿಯನ್ನು :**

1. ಸಹಾಯಕ ಪೋಲೀಸ್ ಆಯುಕ್ತರು, ಮೈಸೂರು ಅರಮನೆ ಭದ್ರತಾ ಪಡೆ, ಮೈಸೂರು ರವರ ಮಾಹಿತಿಗಾಗಿ.
2. ಸಹಾಯಕ ಕಾರ್ಯಪಾಲಕ ಅಭಿಯಂತರರು, ವಿದ್ಯುಚ್ಛಕ್ತಿ ಉಪವಿಭಾಗ/ಸಹಾಯಕ ಅಭಿಯಂತರರು, (ಸಿವಿಲ್) ಮೈಸೂರು ಅರಮನೆ ಮಂಡಳಿ, ಮೈಸೂರು ರವರ ಮಾಹಿತಿಗಾಗಿ.
3. ನಗದು ಸಹಾಯಕರು, ಮೈಸೂರು ಅರಮನೆ ಮಂಡಳಿ, ಮೈಸೂರು ಇವರು ಸ್ವಚ್ಛತಾ ಶುಲ್ಕ ರೂ. 2,500/-ಗಳನ್ನು ಸದರಿ ಸಂಸ್ಥೆಯವರಿಂದ ಜಮೆ ಮಾಡಿಸಿಕೊಳ್ಳುವುದು.

# Report on Marathon – "Run for Wild"

On account of ATMEya 2020, Marathon event "Run for wild" was organized by ATME College of Engineering on 1st March 2020 in in order to create awareness on animal life with the slogan "Live and let live". The Chief guest of the event was The Maharaja of Mysuru H. H. Sri. Yaduveer Krishnadatta Chamarajendra Wadiyar. The event was presided by Sri Arun Kumar L, Chairman of ATMECE, Sri Shivashankar K, Secretary of ATMECE, Sri R. Veeresh Treasurer of ATMECE and Dr. Basavaraj L, Principal of ATMECE Mysuru.





Around 1600 members participated in the event which includes Students of ATMECE, staffs of ATMECE and outside participants. The Run for Wild was inaugurated by H. H. Sri. Yaduveer Krishnadatta Chamarajendra Wadiyar. It started at Kote Anjeneyaswamy temple via Gandhi square, Sayyaji road, Devraj Urs road, JLB road, Ramaswami circle, hundred feet road, R gate and back to Kote Anjeneyaswamy temple.

Professor & Head
Dept. of Electronics & Communication
ATME COLLEGE OF ENGINEERING
Mysuru - 570 028

# 'ಬದುಕಿ, ಬದುಕಲು ಬಿಡಿ' ಮ್ಯಾರಥಾನ್!

## ವನ್ಯಜೀವಿಗಳ ಬಗ್ಗೆ ಜಾಗೃತಿ ಮೂಡಿಸಿದ ಯುವ ಸಮೂಹ




> ಭಾರತದಲ್ಲಿ ಜೀವ ವೈವಿಧ್ಯತೆ ಸಂರಕ್ಷಣೆ ಮಾಡುವುದು ನಮ್ಮ ಜವಾಬ್ದಾರಿ. ಆದರೆ, ಇತ್ತೀಚೆಗೆ ವನ್ಯಜೀವಿಗಳನ್ನು ರಕ್ಷಿಸುವುದು ದೊಡ್ಡ ಸಮಸ್ಯೆಯಾಗಿದೆ. ಸಮಸ್ಯೆಗಳಿಗೆ ಪರಿಹಾರ ಕಂಡುಕೊಳ್ಳದಿರುವುದು ಕಾಡುಗಳ ನಾಶಕ್ಕೆ ಕಾರಣವಾಗುತ್ತಿದೆ. ಯುವ ಸಮೂಹ ಈ ಬಗ್ಗೆ ಎಚ್ಚೆತ್ತುಕೊಳ್ಳಬೇಕು.
>
> -ಯದುವೀರ್ ಕೃಷ್ಣದತ್ತ ಚಾಮರಾಜ ಒಡೆಯರ್, ರಾಜವಂಶಸ್ಥರು

ಮೈಸೂರು: ಇತ್ತೀಚೆಗೆ ನಾನಾ ಉದ್ದೇಶಗಳಿಗಾಗಿ ಮ್ಯಾರಥಾನ್ ನಡೆಯುತ್ತಿದ್ದು, ಯುವ ಸಮೂಹವು ಉತ್ಸುಕರಾಗಿಯೇ ಪಾಲ್ಗೊಳ್ಳುತ್ತಿದ್ದಾರೆ. ಆರೋಗ್ಯಕರ ಸಮಾಜ ನಿರ್ಮಾಣ ಮಾಡುವಲ್ಲಿ ಪ್ರತಿಯೊಬ್ಬರೂ ಪಣ ತೊಟ್ಟಿದ್ದು, ವನ್ಯಜೀವಿ ಸಂರಕ್ಷಣೆ, ಸದೃಢ ಆರೋಗ್ಯ ಇವುಗಳ ಅರಿವನ್ನು ಹೆಚ್ಚಿಸಿಕೊಳ್ಳುತ್ತಿದ್ದಾರೆ.

ಮ್ಯಾರಥಾನ್ ಮೂಲಕ ದೈಹಿಕ ಸಾಮರ್ಥ್ಯ ಹಾಗೂ ಸಹಿಷ್ಣುತೆಯನ್ನು ಹೆಚ್ಚಿಸಬೇಕು. ಇದರಿಂದ ದೇಹದ ಮಾಂಸಖಂಡ, ಕೀಲು, ಎಲುಬು, ಹೃದಯ, ಶ್ವಾಸಕೋಶ ಹಾಗೂ ಮಿದುಳು ಒಂದೇ ದಿನದಲ್ಲಿ 21 ಕಿ.ಮೀ. ಓಟಕ್ಕೆ ಸಜ್ಜಾಗಲು ನೆರವಾಗುತ್ತದೆ ಎನ್ನುತ್ತಾರೆ ಆರೋಗ್ಯ ತಜ್ಞರು.ಈ ನಿಟ್ಟಿನಲ್ಲಿ ಭಾನುವಾರ ನಗರದ ಎಟಿಎಂಇ ಇಂಜಿನಿಯರಿಂಗ್ ಕಾಲೇಜು ವತಿಯಿಂದ 'ರನ್ ಫಾರ್ ವೈಲ್ಡ್' 'ಬದುಕಿ-ಬದುಕಲು ಬಿಡಿ' ಘೋಷಣೆಯೊಂದಿಗೆ ಅರಮನೆಯ ಕೋಟೆ ಆಂಜನೇಯಸ್ವಾಮಿ ದೇವಸ್ಥಾನದಿಂದ ಮ್ಯಾರಥಾನ್ ನಡೆಯಿತು. ರಾಜವಂಶಸ್ಥ ಯದುವೀರ್ ಕೃಷ್ಣದತ್ತ ಚಾಮರಾಜ ಒಡೆಯರ್ ಚಾಲನೆ ನೀಡಿದರು.

ಮುಂಜಾನೆಯಿಂದಲೇ ಎಳೆಬಿಸಿಲು ಮೈತಾಕುತ್ತಿದ್ದಂತೆ, ಶ್ವೇತ ವಸ್ತ್ರಧಾರಿಗಳಾಗಿದ್ದ ಎಲ್ಲ ವಯೋಮಾನದವರು ಮುಷ್ಟಿ ಬಿಗಿ ಹಿಡಿದು ಓಡಲು ಆರಂಭಿಸಿದರು. ನೂರಾರು ಮಂದಿ ಯುವ ಸಮೂಹ ಕಾಡು ಪ್ರಾಣಿಗಳನ್ನು ಉಳಿಸುವ ಕುರಿತು ಜಾಗೃತಿ ಮೂಡಿಸಿದರು. ಅರಮನೆಯ ಕೋಟೆ ಆಂಜನೇಯಸ್ವಾಮಿ ದೇವಸ್ಥಾನದಿಂದ ಆರಂಭಗೊಂಡ ಮ್ಯಾರಥಾನ್ ಓಟ, ದೊಡ್ಡ ಗಡಿಯಾರ, ಗಾಂಧಿ ವೃತ್ತ, ಸಯ್ಯಾಜಿರಾವ್ ರಸ್ತೆ, ಡಿ.ದೇವರಾಜ ಅರಸು ರಸ್ತೆ, ಜೆಎಲ್‌ಬಿ ರಸ್ತೆ, ರಾಮಸ್ವಾಮಿ ವೃತ್ತ ನೂರಡಿ ರಸ್ತೆ ಮಾರ್ಗವಾಗಿ ಚಲಿಸಿ ಬಸವೇಶ್ವರ ವೃತ್ತ ಹಾಗೂ ಆರ್.ಗೇಟ್ ಮೂಲ ಕೋಟೆ ಆಂಜನೇ ಸ್ವಾಮಿ ದೇವಸ್ಥಾನದಲ್ಲೇ ಮ್ಯಾರಥಾನ್ ಅಂತ್ಯಗೊಂಡಿತು. ಎಟಿಎಂಇಸಿಇಯ ಗೌರವಾಧ್ಯಕ್ಷ ಎಲ್.ಅರುಣ್‌ಕುಮಾರ್, ಗೌರವ ಕಾರ್ಯದರ್ಶಿ ಕೆ.ಶಿವಶಂಕರ್, ಆರ್.ವೀರೇಶ್ ಪಾಲ್ಗೊಂಡಿದ್ದರು.

# ವನ್ಯ ಸಂಪತ್ತು ರಕ್ಷಣೆಗಾಗಿ ಓಟ

## ವನ್ಯಜೀವಿ ಸಂರಕ್ಷಣೆ ದೊಡ್ಡ ಸವಾಲು | ರಾಜವಂಶಸ್ಥ ಯದುವೀರ್ ಕಳವಳ

■ ವಿಜಯವಾಣಿ ಸುದ್ದಿಜಾಲ ಮೈಸೂರು

ಎಟಿಎಂಇ ಕಾಲೇಜ್ ಆಫ್ ಇಂಜಿನಿಯರಿಂಗ್ ತನ್ನ ವಾರ್ಷಿಕೋತ್ಸವದ ಅಂಗವಾಗಿ ಭಾನುವಾರ ನಗರದಲ್ಲಿ ಆಯೋಜಿಸಿದ್ದ 'ರಸ್ತೆ ಓಟ'ಕ್ಕೆ ಉತ್ತಮ ಪ್ರತಿಕ್ರಿಯೆ ವ್ಯಕ್ತವಾಯಿತು.

ವನ್ಯ ಸಂಪತ್ತನ್ನು ರಕ್ಷಿಸಿ, ಪರಿಸರ ಸಮತೋಲನ ಕಾಪಾಡಿ ಎಂಬ ಆಶಯದೊಂದಿಗೆ ಆಯೋಜಿಸಿದ್ದ ಓಟದಲ್ಲಿ ನೂರಾರು ಜನರು ಪಾಲ್ಗೊಂಡಿದ್ದರು. ಸಾರ್ವಜನಿಕರು, ಕಾಲೇಜು ಅಧ್ಯಾಪಕ ಹಾಗೂ ಆಡಳಿತ ವರ್ಗ ಹಾಗೂ ವಿದ್ಯಾರ್ಥಿಗಳು ಓಟದಲ್ಲಿ ಭಾಗವಹಿಸಿದ್ದರು.

» ಉತ್ತಮ ಪ್ರತಿಕ್ರಿಯೆ

ಅರಮನೆ ಕೋಟೆ ಆಂಜನೇಯಸ್ವಾಮಿ ದೇವಸ್ಥಾನದ ಆವರಣದಿಂದ ಆರಂಭಗೊಂಡ ಓಟ, ದೊಡ್ಡ ಗಡಿಯಾರ, ಗಾಂಧಿವೃತ್ತ, ಸಯ್ಯಾಜಿರಾವ್ ರಸ್ತೆ, ಡಿ.ದೇವರಾಜ ಅರಸು ರಸ್ತೆ, ಜೆಎಲ್‌ಬಿ ರಸ್ತೆ, ರಾಮಸ್ವಾಮಿ ವೃತ್ತ, ನೂರಡಿ ರಸ್ತೆ, ಮಾರ್ಗವಾಗಿ ಚಲಿಸಿ ಬಸವೇಶ್ವರ ವೃತ್ತ ಹಾಗೂ ಆರ್‌ಗೇಟ್ ಮೂಲಕ ಕೋಟೆ ಆಂಜನೇಸ್ವಾಮಿ ದೇವಸ್ಥಾನದ ಆವರಣದಲ್ಲೇ ಅಂತ್ಯಗೊಂಡಿತು.

ಓಟಕ್ಕೆ ಚಾಲನೆ ನೀಡಿ ಮಾತನಾಡಿದ ರಾಜವಂಶಸ್ಥ ಯದುವೀರ್ ಕೃಷ್ಣದತ್ತ ಚಾಮರಾಜ ಒಡೆಯರ್, ಭಾರತದಲ್ಲಿ ಜೀವ ವೈವಿಧ್ಯತೆ ಸಂರಕ್ಷಣೆ ಮಾಡುವುದು ನಮ್ಮ ಜವಾಬ್ದಾರಿಯಾಗಿದೆ. ಆದರೆ, ಇತ್ತೀಚೆಗೆ ವನ್ಯಜೀವಿಗಳನ್ನು ರಕ್ಷಿಸುವುದು ದೊಡ್ಡ ಸವಾಲಾಗಿದೆ. ಸಮಸ್ಯೆಗಳಿಗೆ ಪರಿಹಾರ ಕಂಡುಕೊಳ್ಳದಿರುವುದು ಕಾಡುಗಳ ನಾಶಕ್ಕೆ ಕಾರಣವಾಗುತ್ತಿದೆ. ಯುವ ಸಮೂಹ ಈ ಬಗ್ಗೆ ಎಚ್ಚೆತ್ತುಕೊಳ್ಳಬೇಕು ಎಂದು ಸಲಹೆ ನೀಡಿದರು.

ಅರಣ್ಯ ನಾಶ ಹೆಚ್ಚುತ್ತಿರುವುದರಿಂದ ತಾಪಮಾನ ಹಾಗೂ ಪ್ರವಾಹದಂತಹ ಅನಾಹುತ ಸಂಭವಿಸಲು ಕಾರಣವಾಗುತ್ತಿವೆ. ಮೈಸೂರು ಭಾಗದಲ್ಲಿ ಉತ್ತಮ ಅರಣ್ಯ ಸಂಪತ್ತು ಇದ್ದು, ಅವುಗಳನ್ನು ಸಂರಕ್ಷಿಸುವ ನಿಟ್ಟಿನಲ್ಲಿ ಸಾರ್ವಜನಿಕರು ಮುಂದಾಬೇಕು ಎಂದು ಸಲಹೆ ನೀಡಿದರು.

ಕಾಲೇಜಿನ ಗೌರವಾಧ್ಯಕ್ಷ ಎಲ್.ಅರುಣ್‌ಕುಮಾರ್, ಗೌರವ ಕಾರ್ಯದರ್ಶಿ ಕೆ.ಶಿವಶಂಕರ್, ಖಜಾಂಚಿ ಆರ್.ವೀರೇಶ್ ಇತರರಿದ್ದರು.



ನಗರದಲ್ಲಿ ಭಾನುವಾರ ಆಯೋಜಿಸಿದ್ದ ರಸ್ತೆ ಓಟಕ್ಕೆ ಯದುವೀರ್ ಕೃಷ್ಣದತ್ತ ಚಾಮರಾಜ ಒಡೆಯರ್ ಚಾಲನೆ ನೀಡಿದರು. ಎಲ್. ಅರುಣ್‌ಕುಮಾರ್, ಕೆ.ಶಿವಶಂಕರ್, ಆರ್. ವೀರೇಶ್ ಇತರರಿದ್ದರು.

# ನಗರದಲ್ಲಿ ನಾಗರಿಕರಿಗಾಗಿ ಟೆಕ್ನೀಕ್ಸ್ ರನ್

■ ವಿಜಯವಾಣಿ ಸುದ್ದಿಜಾಲ ಮೈಸೂರು

ನಗರದ ನ್ಯಾಷನಲ್ ಇನ್‌ಸ್ಟಿಟ್ಯೂಟ್ ಆಫ್ ಇಂಜಿನಿಯರಿಂಗ್ (ಎನ್‌ಐಇ) ಕಾಲೇಜಿನ 'ಟೆಕ್ನೀಕ್ಸ್-2020' ಅಂಗವಾಗಿ ಭಾನುವಾರ 'ಟೆಕ್ನೀಕ್ಸ್ ರನ್' (ರಸ್ತೆ ಓಟ) ಆಯೋಜಿಸಲಾಗಿತ್ತು.

» ಓಟದಲ್ಲಿ ಭಾಗವಹಿಸಿದ್ದ ಪುರುಷರು, ಮಹಿಳೆಯರು

'ಆಟಿಸಂ' ಎಂಬ ಆಶಯದೊಂದಿಗೆ ನಡೆದ ಮ್ಯಾರಥಾನ್‌ನಲ್ಲಿ ನೂರಾರು ಜನ ಓಡಿದರು. 5 ಮತ್ತು 12 ಕಿ.ಮೀ. ಪುರುಷರ ವಿಭಾಗ, ಮಹಿಳೆಯರು ಮತ್ತು 50 ವರ್ಷ ಮೇಲ್ಪಟ್ಟ ಹಿರಿಯ ನಾಗರಿಕರ ವಿಭಾಗ ಹಾಗೂ 21 ಕಿ.ಮೀ. ಪುರುಷರು ಮತ್ತು ಮಹಿಳೆಯರ ವಿಭಾಗದಲ್ಲಿ ಸ್ಪರ್ಧೆ ನಡೆಯಿತು.

ಮಾನಂದವಾಡಿ ರಸ್ತೆಯ ಎನ್‌ಐಇ ಕಾಲೇಜು ಆವರಣದಲ್ಲಿ ಆರಂಭಗೊಂಡ 5 ಕಿ.ಮೀ. ಓಟ ಸಿಲ್ಕ್ ಫ್ಯಾಕ್ಟರಿ ವೃತ್ತ, ಸಿಕೆಸಿ ಶಾಲೆ, ಆರ್‌ಟಿಒ ವೃತ್ತ ಬಳಸಿಕೊಂಡು, ಅದೇ ಮಾರ್ಗದಲ್ಲಿ ಪುನಃ ಎನ್‌ಐಇ ಕಾಲೇಜು ಆವರಣದಲ್ಲಿಯೇ ಅಂತ್ಯವಾಯಿತು. 12 ಕಿ.ಮೀ. ಓಟ ಎನ್‌ಐಇ ಕಾಲೇಜು ಆವರಣದಲ್ಲಿ ಆರಂಭಗೊಂಡು, ಸಿಲ್ಕ್ ಫ್ಯಾಕ್ಟರಿ ವೃತ್ತ, ಸಿಕೆಸಿ ಶಾಲೆ, ಆರ್‌ಟಿಒ, ರಾಮಸ್ವಾಮಿ, ಮಹಾರಾಜ ಕಾಲೇಜು ವೃತ್ತ, ಸರಸ್ವತಿಪುರಂ, ವಿಶ್ವಮಾನವ ಜೋಡಿರಸ್ತೆ, ಎ-ಟು-ಝಡ್, ಅಮ್ಮ ಕಾಂಪ್ಲೆಕ್ಸ್, ಶಾಂತಿಸಾಗರ್, ಇಸ್ಕಾನ್ ದೇವಸ್ಥಾನ ಮಾರ್ಗವಾಗಿ ಕಾಲೇಜಿನಲ್ಲಿ ಅಂತ್ಯವಾಯಿತು. ಇನ್ನು 21 ಕಿ.ಮೀ. ಓಟ ಕೂಡ ಎನ್‌ಐಇ ಕಾಲೇಜು ಆವರಣದಲ್ಲಿ ಆರಂಭಗೊಂಡು ನಗರದ ನಾನಾ ಭಾಗದಲ್ಲಿ ಸಂಚರಿಸಿತು. ಓಟದಲ್ಲಿ ಭಾಗವಹಿಸಿದ್ದ ಎಲ್ಲ ಸ್ಪರ್ಧಿಗಳಿಗೆ ಓಟದ ಉದ್ದಕ್ಕೂ ನೀರು, ಹಣ್ಣು ನೀಡಲಾಯಿತು. ಸ್ಪರ್ಧೆ ನಂತರ ಕಾಲೇಜಿನ ಆವರಣದಲ್ಲಿ ಸ್ಪರ್ಧಿಗಳಿಗೆ ಡಿಜೆ ಆಯೋಜಿಸಲಾಗಿತ್ತು.

# ರನ್ ಫಾರ್ ವೈಲ್ಡ್ ಮ್ಯಾರಾಥಾನ್

## ರಾಜವಂಶಸ್ಥ ಯದುವೀರ ಕೃಷ್ಣದತ್ತ ಚಾಮರಾಜ ಒಡೆಯರ್‌ರಿಂದ ಚಾಲನೆ

• **ಕನ್ನಡಪ್ರಭ ವಾರ್ತೆ** ಮೈಸೂರು

ಎಟಿಎಂಇ ಕಾಲೇಜಿನ ವಾರ್ಷಿಕೋತ್ಸವ ಅಂಗವಾಗಿ ವನ್ಯ ಸಂಪತ್ತು ಮತ್ತು ವನ್ಯಜೀವಿಗಳ ಸಂರಕ್ಷಣೆ ಮತ್ತು ಪೋಷಣೆಯ ಮಹತ್ವದ ಬಗ್ಗೆ ಸಾರ್ವಜನಿಕರಲ್ಲಿ ಅರಿವು ಮೂಡಿಸಲು ಭಾನುವಾರ ರನ್ ಫಾರ್ ವೈಲ್ಡ್ ಘೋಷಣೆಯೊಂದಿಗೆ ಮ್ಯಾರಾಥಾನ್ ಆಯೋಜಿಸಲಾಗಿತ್ತು.

ನಗರದ ಅರಮನೆ ಕೋಟೆ ಆಂಜನೇಯ ಸ್ವಾಮಿ ದೇವಸ್ಥಾನದ ಮುಂಭಾಗ ಈ ಮ್ಯಾರಾಥಾನ್‌ಗೆ ರಾಜವಂಶಸ್ಥ ಯದುವೀರ ಕೃಷ್ಣದತ್ತ ಚಾಮರಾಜ ಒಡೆಯರ್ ಚಾಲನೆ ನೀಡಿ ಮಾತನಾಡಿ, ವನ್ಯ ಸಂಪತ್ತಿನ ರಕ್ಷಣೆ ಪ್ರತಿಯೊಬ್ಬನಾಗರಿಕರ ಜವಾಬ್ದಾರಿ. ಅರಣ್ಯ ನಾಶದಿಂದ ಅನೇಕ ಪ್ರಕೃತಿ ವಿಕೋಪಗಳು ಸಂಭವಿಸುತ್ತಿವೆ. ಮೈಸೂರು ಭಾಗದಲ್ಲಿ ಸಾಕಷ್ಟು ವನ್ಯ ಸಂಪತ್ತಿದ್ದು, ಅದನ್ನು ಕಾಪಾಡುವುದು ನಮ್ಮೆಲ್ಲರ ಹೊಣೆ ಎಂದರು.

ಕೋಟೆ ಆಂಜನೇಯ ಸ್ವಾಮಿ ದೇವಸ್ಥಾನದ ಮುಂಭಾಗದಿಂದ ಆರಂಭವಾದ ಓಟವು ದೊಡ್ಡ ಗಡಿಯಾರ, ಗಾಂಧಿ ಚೌಕ, ಸಯ್ಯಾಜಿರಾವ್ ರಸ್ತೆ, ದೇವರಾಜ ಅರಸು ರಸ್ತೆ, ಜೆಎಲ್‌ಬಿ ರಸ್ತೆ, ರಾಮಸ್ವಾಮಿ ವೃತ್ತ, ಚಾಮರಾಜ ಜೋಡಿ ರಸ್ತೆ, ಗನ್‌ಹೌಸ್ ವೃತ್ತ, ಹಾರ್ಡಿಂಜ್ ವೃತ್ತದ ಮೂಲಕ ಮತ್ತೆ ಕೋಟೆ ಆಂಜನೇಯ ಸ್ವಾಮಿ ದೇವಸ್ಥಾನದ ಮುಂಭಾಗದಲ್ಲಿ ಮುಕ್ತಾಯವಾಯಿತು. ಈ ಓಟದಲ್ಲಿ ಎಟಿಎಂಇ ಕಾಲೇಜಿನ ವಿದ್ಯಾರ್ಥಿಗಳು, ಸಿಬ್ಬಂದಿ ವರ್ಗದವರು ಹಾಗೂ ಸಾರ್ವಜನಿಕರೂ ಸೇರಿದಂತೆ 1600 ಮಂದಿ ಭಾಗವಹಿಸಿದ್ದರು.

ಎಟಿಎಂಇಸಿಇ ಗೌರವಾಧ್ಯಕ್ಷ ಎಲ್.ಅರುಣ್ ಕುಮಾರ್, ಗೌರವ ಕಾರ್ಯದರ್ಶಿ ಕೆ. ಶಿವಶಂಕರ್, ಖಜಾಂಚಿ ಆರ್.ವೀರೇಶ್, ಸದಸ್ಯ ಎಚ್. ವೆಂಕಟೇಶ್, ಪ್ರಾಂಶುಪಾಲ ಡಾ.ಎಲ್.ಬಸವರಾಜ್. ಸಾಂಸ್ಕೃತಿಕ ಸಮಿತಿ ಅಧ್ಯಕ್ಷ ಡಾ.ಪಿ.ಕೆ. ಮಹೇಶ್ ಮೊದಲಾದವರು ಇದ್ದರು.



ಮೈಸೂರಿನ ಎಟಿಎಂಇ ಕಾಲೇಜು ಆಯೋಜಿಸಿದ್ದ ರನ್ ಫಾರ್ ವೈಲ್ಡ್ ಮ್ಯಾರಾಥಾನ್‌ಗೆ ಅರಮನೆ ಕೋಟೆ ಆಂಜನೇಯ ಸ್ವಾಮಿ ದೇವಸ್ಥಾನದ ಮುಂಭಾಗ ರಾಜವಂಶಸ್ಥ ಯದುವೀರ ಕೃಷ್ಣದತ್ತ ಚಾಮರಾಜ ಒಡೆಯರ್ ಚಾಲನೆ ನೀಡಿದರು.

## ಎನ್‌ಐಇಯಿಂದ ಟೆಕ್ನೀಕ್ಸ್ ರನ್

ಎನ್‌ಐಇ ಕಾಲೇಜು ಟೆಕ್ನೀಕ್ಸ್ ಅಂಗವಾಗಿ ಭಾನುವಾರ ಆಟಿಸಂ ಎಂಬ ಆಶಯದೊಂದಿಗೆ ಆಯೋಜಿಸಿದ್ದ ಟೆಕ್ನೀಕ್ಸ್ ರನ್ ಮ್ಯಾರಥಾನ್‌ನಲ್ಲಿ ನೂರಾರು ಜನ ಭಾಗವಹಿಸಿದ್ದರು. ಮಾನಂದವಾಡಿ ರಸ್ತೆಯ ಎನ್‌ಐಇ ಕಾಲೇಜು ಆವರಣದಲ್ಲಿ ಆರಂಭವಾದ 5 ಕಿ.ಮೀ, 12 ಕಿ.ಮೀ ಮತ್ತು 21 ಕಿ.ಮೀ. ಓಟದಲ್ಲಿ ವಿದ್ಯಾರ್ಥಿಗಳು, ಪುರುಷರು, ಮಹಿಳೆಯರು ಪಾಲ್ಗೊಂಡಿದ್ದರು. ಈ ಓಟದಲ್ಲಿ ಸಂಗ್ರಹವಾದ ನೋಂದಣಿ ಶುಲ್ಕದಲ್ಲಿ ಹಣವನ್ನು ಕಾಲೇಜು ಆಡಳಿತ ಮಂಡಳಿಯು ಆಟಿಸಂ ಮಕ್ಕಳ ಅಭಿವೃದ್ಧಿಗೆ ಬಳಸಲು ಮುಂದಾಗಿದೆ.